
ಪದಕ್ಕೆ ತನ್ನದೇ ಸಾರ್ಥಕ್ಯವಿದೆ. ಅದಕ್ಕೆ ಅದರದೇ ಆದ ಶಾಶ್ವತತೆಯಿದೆ ಮತ್ತು ಭಂಗುರತೆಯಿದೆ. ಆದರೆ, ಕತ್ತಲೆಯಲ್ಲಿ ಬೆಳಗಿದಾ ಬೆಳಕು ಬೆಳಗಿಸಿದೆ ಬದುಕ. ಕವಿತೆಯೂ ಹೀಗೆಯೇ. ಕವಿಯಾಗಿರುವುದು ಅಹಂಕಾರವಲ್ಲ, ಅದೊಂದು ಅದಿತ್ತ ಉಡುಗೊರೆ, ಅದೇ ಕವಿಯಾಗಿಸಿದ್ದು, ದೂತನನ್ನಾಗಿಸಿದ್ದು, ಕತ್ತಲಲ್ಲಿ ಭರವಸೆಯ ಬೆಳಕಾಗಿಸಿದ್ದು. ಈ ಕಾಲಮಾನದ ಬದುಕನ್ನು ಸಹ್ಯವಾಗಿಸಿದ್ದು.

ಇಂದು ನಾವೆಲ್ಲರೂ ಇಲ್ಲಿ ಭಾರತದಲ್ಲಿ ಸೇರಿದ್ದೇವೆ, ನಮ್ಮೆಲ್ಲರಿಗೂ ಸೇರಿದ ಒಂದು ಭೂಪ್ರದೇಶದಲ್ಲಿ ಇದ್ದೇವೆ. ಇಲ್ಲೊಂದು ಕಾರ್ಯಕ್ರಮ ಪ್ರಾರಂಭವಾಗುವುದರಲ್ಲಿದೆ ಎಂದು ನಾನು ನಿಮಗೆಲ್ಲರಿಗೂ ಸವಿನಯಪೂರ್ವಕವಾಗಿ ನಿವೇದಿಸಿಕೊಳ್ಳುತ್ತೇನೆ.

ಜೀವನ ಸಾಕಾರಗೊಂಡಿರುವುದು ಹೊರಗಿನಿಂದ. ನಾವು ನಮ್ಮನ್ನೇ ಸೃಷ್ಟಿಸಿಕೊಳ್ಳುತ್ತಿದ್ದೇವೆ, ಇಲ್ಲಿ ಪರಸ್ಪರ ಒಬ್ಬರನ್ನೊಬ್ಬರು ಉತ್ತೇಜಿಸುತ್ತಿದ್ದೇವೆ. ನಮ್ಮ ಸೃಷ್ಟಿಯನ್ನು ನಮ್ಮ ನಮ್ಮೊಳಗೂ, ಕೇಳಲು ಬಂದವರೊಂದಿಗೂ ಹಂಚಿಕೊಳ್ಳೋಣ, ಪ್ರೀತಿಯ ಇನ್ನೊಂದು ಪರಿಭಾಷೆಯನ್ನು.

ದೇವರು ಮನುಷ್ಯನನ್ನು ತನ್ನ ಪ್ರತಿರೂಪದಲ್ಲಿ ಸೃಷ್ಟಿಸಿರಬಹುದು ಅಥವಾ ಮನುಷ್ಯ ತನ್ನ ಪ್ರತಿರೂಪದಲ್ಲಿ ತನ್ನ ದೇವರನ್ನು ಸೃಜಿಸಿರಬಹುದು. ಯಾವಾಗ ಮನುಷ್ಯ ತನಗೆ ತಾನೇ ಸೃಷ್ಟಿಕಥನವನ್ನು ಹೇಳಿಕೊಳ್ಳಲು ಪ್ರಾರಂಭಿಸಿದನೋ, ದೇವರಿಗೆ ಮೊದಲ ಸೃಜನಶೀಲ ಗುಣ ಲಕ್ಷಣಗಳನ್ನು ನೀಡಿದ. ಸೃಷ್ಟಿ, ದೈವದ ಅಥವಾ ಮನುಜನ ಮೊದಲ ಕಾರ್ಯವೆಂದು ಭಾವಿಸಿದರು. ಈ ಕಾರ್ಯದಲ್ಲಿ ಇಬ್ಬರೂ ಒಂದೇ ಸಾಧ್ಯತೆಯನ್ನೂ ಫಲಿತವನ್ನೂ ಹೊಂದಿರುತ್ತಾರೆ.

ಬರೆಯುವುದು ನನ್ನ ಸೃಷ್ಟಿಯ ಕ್ರಿಯೆ. ನಾನು ಪ್ರತೀ ಸಾರಿ ಬರೆದಾಗಲೂ ನನ್ನಲ್ಲೇ ನಾನು ಹಿಂದೆ ಕಂಡಿರದ ಹೊಸತನ್ನು ಕಾಣುತ್ತೇನೆ, ನನ್ನದು ಮಾತ್ರವಲ್ಲ ಇನ್ನೊಬ್ಬರದ್ದೂ ಎಲ್ಲರದ್ದೂ. ಯಾವುದನ್ನೇ ತಿಳಿದುಕೊಳ್ಳುವುದಾಗಲೀ, ಅರ್ಥಮಾಡಿಕೊಳ್ಳುವುದಾಗಲೀ, ಇಲ್ಲವೇ ಅದರಂತೇ ನಡೆಯುವುದಾಗಲೀ ಇದಾವುದೂ ನಾನು ನನ್ನೊಂದಿಗೆ ಹೊಂದಿರುವ ಅತೀ ನಿಕಟ ಸಂಬಂಧವಲ್ಲ.



ಸೃಜನಶೀಲ ಕ್ರಿಯೆ ತಿಳಿವಳಿಕೆಗಿಂತ ಮುಂಚಿನದು, ಅರ್ಥ ಮಾಡಿಕೊಳ್ಳುವುದಕ್ಕಿಂತ ಆಳದ್ದು, ಕ್ರಿಯೆಗಿಂತ ಹೆಚ್ಚು ನಿರ್ಣಾಯಕವಾದದ್ದು.

ನಾನು ಹೇಳುತ್ತಿರುವುದರ ತಾತ್ಪರ್ಯವೇನೆಂದರೆ, ಕಾವ್ಯಾತ್ಮಕವಾಗಿ ಯೋಚಿಸಿ ಅಥವ ಯೋಚಿಸಿ ಕಾವ್ಯವಾಗಿಸಿ. ಈ ಸೃಜನಶೀಲ ಕಲೆಯಲ್ಲಿ ಮತ್ತೆ ನಾವು ಜೀವಿಸಿದ ಕ್ಷಣವನ್ನು ಮತ್ತೆ ಜೀವಿಸುತ್ತೇವೆ, ಮತ್ತೆ ಹುಟ್ಟುತ್ತೇವೆ. ಆ ಕ್ಷಣ ಯಾವುದೇ ನೆರಳಿರದಂತೆ ನೆನಪಿರದಂತೆ ನಾನಿಲ್ಲದೆ ನಮ್ಮನ್ನು ನಾವು ಕಂಡುಕೊಳ್ಳುತ್ತೇವೆ. ಆ ಸೃಜನಶೀಲ ಕ್ಷಣ ನಾವಿರುವಂತೆ ಇರಲು ಅಗತ್ಯ. ಇಂಥ ಕಾಣ್ಕೆಗೆ ಅಗತ್ಯವಾದ ಜಾಗದಲ್ಲಿ ಪ್ರತೀ ಸೃಜನಾತ್ಮಕ ಕ್ರಿಯೆ ನಮ್ಮನ್ನು ತಂದಿಡುತ್ತದೆ. ಅದೊಂದು ಶೂನ್ಯ. ಅದರಿಂದಲೇ ಎಲ್ಲಾ ಉದಿಸುವುದು. ಅದನ್ನು ಕೇಳುವುದರಿಂದ ಎಲ್ಲ ತಿಳಿಯುತ್ತದೆ. ಅದಕ್ಕಾಗಿಯೇ ಮತ್ತೆ ಮತ್ತೆ ಸೃಜನಶೀಲ ಕ್ರಿಯೆಯನ್ನು ಸೃಷ್ಟಿಗೆ, ಹುಟ್ಟಿಗೆ ಸಮೀಕರಿಸುತ್ತೇನೆ. ನಿರಂತರ ಸೃಷ್ಟಿ – ನಿರಂತರ ಹುಟ್ಟು.

ನಾನು ನಿರಂತರ ಸೃಷ್ಟಿ ಅಥವಾ ನಿರಂತರ ಹುಟ್ಟನ್ನು ಮುಖಾಮುಖಿಯಾಗಿ ಅನುಭವಿಸಿದ್ದೇನೆ ಅಥವಾ ಬೆತ್ತಲಾಗಿ ಬೆತ್ತಲನ್ನು ನೋಡಿದ್ದೇನೆ. ಸೃಜನಶೀಲತೆ ನಿರ್ಣಾಯಕವಾದದ್ದು, ಅದನ್ನು ನಾವು ನಿರಾಕರಿಸಲು ಬರುವುದಿಲ್ಲ. ಅದೊಂದು ಉಡುಗೊರೆ. ಸೃಜಿಸುವುದು ನಮ್ಮನ್ನು ನಾವು ಕಂಡುಕೊಳ್ಳುವ ಮಾರ್ಗವಲ್ಲ, ನಮ್ಮನ್ನು ಸೃಷ್ಟಿಸಲು ಅದಕ್ಕೆ ಅನುವು ಮಾಡಿಕೊಡುವುದೇ ಇರಬೇಕು. ●